ಹಲಸಿನ ಹಪ್ಪಳದ ಹಿಟ್ಟು, ಸಂಡಿಗೆ ಹಿಟ್ಟು, ಪ್ರತಿಯೊಂದಕ್ಕೂ ಒಂದು ವಿಶಿಷ್ಟ ರುಚಿ. ಬಿಸಿಲಿಗೂ ಒಂದು ಪರಿಮಳ, ರುಚಿ ಇರುತ್ತದೆಯಾ ಎಂದು ಕೇಳುವವರು ಅರೆ ಒಣಗಿದ ಸಂಡಿಗೆ ತಿಂದು ಗಮನಿಸಬೇಕು. ನನ್ನ ಪ್ರಕಾರ ಬಿಸಿಲಿಗೆ ಪರಿಮಳ ಇದೆ. ರುಚಿಯೂ ಇದೆ. ಕೆಲಕೆಲವು ಖಾದ್ಯಗಳ ಜೊತೆ ಬಿಸಿಲಿನ ಸಂಯೋಗ ಮೂಲರುಚಿಯನ್ನು ಇಮ್ಮಡಿಸುತ್ತದೆ. ವಸುಧೇಂದ್ರ ಅವರ 'ಕೋತಿಗಳು ಸಾರ್ ಕೋತಿಗಳು' ಪ್ರಬಂಧ ಇಲ್ಲಿ ನೆನಪಾಗುತ್ತಿರುವುದಕ್ಕೆ ಒಂದು ಸಕಾರಣ ಇದೆ. ಇಂಗಿನ ವಾಸನೆ ಇರುವ ಹಪ್ಪಳ, ಸಂಡಿಗೆಗಳನ್ನು ಕೋತಿಗಳು ಕದ್ದು ಹಾರಿಸುವುದಿಲ್ಲ ಎನ್ನುವ ಕಾರಣಕ್ಕೆ ಹಿಟ್ಟಿಗೆ ಇಂಗು ಸೇರಿಸಿ ಸಂಡಿಗೆ ಮಾಡುತ್ತಿದ್ದ ಪ್ರಸಂಗವನ್ನು ಹಿಂದೆ ಓದಿದ ನೆನಪಿನಿಂದ ಉದ್ಧರಿಸುತ್ತಿದ್ದೇನೆ. ಮೆಟ್ಟುಗತ್ತಿಯ ವಿಷಯಕ್ಕೆ ಬರೋಣ. ಮೇಲ್ಮೈಯ ಮುಳ್ಳುಗಳು ದೂರದೂರವಾಗಿದ್ದರೆ ಹಲಸಿನಕಾಯಿ ಚೆನ್ನಾಗಿ ಬಲಿತಿದೆ ಎನ್ನುವ ಲೆಕ್ಕ. ಬಲಿತ ಹಲಸಿನಕಾಯಿಗಳೆಲ್ಲಾ ಹಪ್ಪಳ ಮಾಡುವುದಕ್ಕೆ ಬರುತ್ತಿರಲಿಲ್ಲ. ಕೆಲಕೆಲವು ಮರದ ಕಾಯಿಗಳು ಮಾತ್ರಾ ಹಪ್ಪಳ ಮಾಡುವುದಕ್ಕೆ ಪ್ರಶಸ್ತ. ಹಪ್ಪಳದ ಮರ, ಚಿಪ್ಸಿನ ಮರ ಎಂದು ಅವುಗಳ ಗುಣಲಕ್ಷಣಕ್ಕೆ ತಕ್ಕ ಬಿರುದು. ಕಾಯನ್ನು ಕುಡುಗೋಲಿನಿಂದ ಕೊಯ್ಯದೆ ಮೆಟ್ಟುಗತ್ತಿಯಿಂದ ತುಂಡರಿಸುವುದಾದಲ್ಲಿ ಆ ಕೆಲಸ ಮಾಡುವುದು ತೋಳ್ಬಲ ಗಟ್ಟಿಯಾಗಿರುವ ಗಂಡುಹೈಕಳ ಕೆಲಸ. ಮೆಟ್ಟುಗತ್ತಿಯ ಮೇಲೆ ಬಲವಾಗಿ ಎರಡೂ ಕಾಲೂರಿ ನಿಂತು ದೊಡ್ಡ ಗಾತ್ರದ ಹಲಸಿನಕಾಯನ್ನು ಆ ಎತ್ತರದಿಂದ ಹರಿತವಾದ ಕತ್ತಿಯ ಅಲುಗಿನ ಮೇಲೆ ಬೀಳುವಂತೆ ಧಬಕ್ಕನೆ ಎತ್ತಿ ಹಾಕಿದರೆ ಹಲಸಿನಕಾಯಿ ಸಮನಾಗಿ ಇಬ್ಭಾಗವಾಗುವ ವರಸೆ. ಮೆಟ್ಟುಗತ್ತಿಯ ಮೇಲೆ ಕೂತು ಕಾಯನ್ನು ಸೇಡೆ ಮಾಡಿಕೊಡುವವರು ಒಬ್ಬರಾದರೆ ಸೊಳೆ ಬಿಡಿಸಲು ಸುತ್ತುವರಿದ ಮಕ್ಕಳ ಗುಂಪು. ಕಲಕಲ ಮಾತು. ಕಿಲಕಿಲ ನಗೆ. ಸಣ್ಣ ವಿಷಯಕ್ಕೆ ಮುನಿಸಿಕೊಂಡು ಕೆಲಸ ಕೈಬಿಟ್ಟು ಎದ್ದು ಹೋಗುವ ಕೆಲಸಗಳ್ಳರು. ಬೇಯಿಸಿ, ಉರಿಖಾರದ ಜೀರಿಗೆಮೆಣಸು, ಉಪ್ಪು ಬೆರೆಸಿ ಕುಟ್ಟಿ, ಲಟ್ಟಿಸಿ, ಗಣಗಣ ಬಿಸಿಲಲ್ಲಿ ಗರಿಮುರಿಯಾಗಿ ಒಣಗುವ ಹಪ್ಪಳಗಳನ್ನು ಡ್ರಮ್ಮುಗಟ್ಟಲೆ ಸ್ಟಾಕು ಮಾಡಿಡುವ ಉಮೇದು. ತಿನ್ನುವಾಗಲೂ ಹಾಗೇ. ಒಂದು, ಎರಡು ಅಂದರೆ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ. ಮುರುವಿನೆಲೆಯ ಕೆಂಡದಲ್ಲಿ ಸುಟ್ಟು, ಕೊಬ್ಬರಿಎಣ್ಣೆ ಸವರಿದ ಹಪ್ಪಳಗಳನ್ನು ಡಜನ್‌ಗಟ್ಟಲೆ ಮೆದ್ದರೇ ತೃಪ್ತಿ. ನನ್ನ ತೌರೂರಿನ ಹಲಸಿನಹಪ್ಪಳಗಳಷ್ಟು ರುಚಿಯಾಗಿರುವ ಹಲಸಿನ ಹಪ್ಪಳಗಳನ್ನು ಮತ್ತೆಲ್ಲೂ ನಾನು ತಿಂದಿಲ್ಲ ಅಂದರೆ ಅಭಿಮಾನದ ಪರಾಕಾಷ್ಠೆ ಅನಿಸಬಹುದಾದರೂ ನನ್ನ ಮಟ್ಟಿಗೆ ಈ ವಿಷಯ ಸತ್ಯ. ಚೌಲ, ಮದುವೆ, ಮುಂಜಿ ಮುಂತಾದ ವಿಶೇಷಕಟ್ಲೆಗಳು ಮನೆಯಲ್ಲೇ ನಡೆಯುತ್ತಿದ್ದ ಕಾಲದಲ್ಲಿ ಅಡುಗೆಭಟ್ಟರ ಪರಿವಾರದ ಜೊತೆ ಊರ ಮಂದಿ ಕೂಡಾ ಸಹಾಯಕ್ಕೆ ಒಗ್ಗೂಡುತ್ತಿದ್ದರು. ಉರಿವ ಬೆಂಕಿಗೆ ಹಿಡಿದು ಊಟದ ಬಾಳೆಲೆ ಕಾಸಿ ವರೆಸಿಡುವುದು, ಮನೆ ಎದುರಿನ ದೊಡ್ಡ ಅಂಗಳದ ಸುತ್ತಾ ಚತುಷ್ಪಾದಿಗಳು ಸಲೀಸಾಗಿ ಒಳ ನುಗ್ಗದಂತೆ ಬಿದಿರಿನ ತಟ್ಟಿ ಕಟ್ಟಿ ಮರೆ ಮಾಡುವುದು, ಮುಂಬಾಗಿಲಿಗೆ ತೋರಣ ಕಟ್ಟಿ ಶೃಂಗರಿಸುವುದು, ಇತ್ಯಾದಿಗಳ ಜೊತೆ ನಾಲ್ಕಾರು ಜನ ಒಂದೊಂದು ಮೆಟ್ಟುಗತ್ತಿ ಇಟ್ಟುಕೊಂಡು ವಿರಾಜಮಾನರಾಗಿ ಹೆಚ್ಚುವ, ಕೊಚ್ಚುವ, ತುರಿಯುವ ಗೌಜು.

'ನಂಗೊಂದು ಮೆಟ್ಟುಗತ್ತಿ ಇದ್ರೆ ಕೊಡ್ರೋ. ನಾಲ್ಕು ಕಡಿ ಕಾಯಾದ್ರೂ ತುರೀತೀನಿ' ಎನ್ನುವ ಪರೋಪಕಾರಿ ಪಾಪಣ್ಣಗಳ ಉತ್ಸಾಹ. ಎಳೆಯರ ಕಣ್ಣಿಗೆ ಅಪರೂಪದ ಸಂಭ್ರಮವೊಂದು ಮನೆ ಹೊಕ್ಕಂತೆ ಕಾಣುವ ಉಲ್ಲಾಸದ ಉಬ್ಬು. ಈಗ ದೊಡ್ಡ ಮಟ್ಟದ ಸಂತರ್ಪಣೆ ಮನೆಗಳೇನಿದ್ದರೂ ಲಕ್ಷಗಟ್ಟಲೆ ಹಣ ತೆರುವ ಪೇಟೆಯ ಛತ್ರಗಳಲ್ಲಿ, ಅಲ್ಲಲ್ಲ, ಕಲ್ಯಾಣಮಂದಿರಗಳಲ್ಲಿ. ಊರ ಜನ